International Journal of Kannada Research
www.kannadajournal.com

ISSN: 2454–5813
IJKR 2019; 5(1): 236-238
© 2019 IJKR
www.kannadajournal.com
Received: 24-11-2018
Accepted: 28-12-2018

**ಹರೀಶಗೌಡ**
ಕನ್ನಡಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆಕಾಲೇಜು
ಕೃಷ್ಣರಾಜನಗರ, ಕರ್ನಾಟಕ, ಭಾರತ

**Correspondence**
**ಹರೀಶಗೌಡ**
ಕನ್ನಡಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆಕಾಲೇಜು
ಕೃಷ್ಣರಾಜನಗರ, ಕರ್ನಾಟಕ, ಭಾರತ

# ಕವಯಿತ್ರಿ ಕಂತಿ

**ಹರೀಶಗೌಡ**

ಹನ್ನೆರಡನೆಯ ಶತಮಾನದಲ್ಲಿ ಹೊಯ್ಸಳ ಅರಸರ ವೈಭವ ಪೂರ್ಣರಾಜಧಾನಿಯಾಗಿ ಮೆರೆದ ಹಳೇಬೀಡಿನ ಇನ್ನೊಂದು ಹೆಸರು ದೋರಸಮುದ್ರ.ದೋರಸಮುದ್ರ ಸಿಂಹಾಸನವನ್ನೇರಿ ಕನ್ನಡನಾಡಿನ ರಾಜಕೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಇತಿಹಾಸಕ್ಕೊಂದು ಎಂದಿಗೂ ಮರೆಯದಂತಹ ಹೆಸರನ್ನು ತಂದುಕೊಟ್ಟ ಶ್ರೇಯ ವಿಷ್ಣುವರ್ಧನನಿಗೇ ಸಲ್ಲತಕ್ಕುದು. ಕ್ರಿ. ಶ. 1111 ರಿಂದ 1141ರ ವರೆಗೆ ಒಟ್ಟು ಮುವ್ವತ್ತು ವರುಷಗಳ ಕಾಲ ರಾಜ್ಯಭಾರವಹಿಸಿ ನಾಡನ್ನುಕಟ್ಟಿ, ಧರ್ಮವನ್ನು ಸಂರಕ್ಷಿಸಿ ಕುಸಿದು ಹೋಗಲಿದ್ದಜನಜೀವನದ ಹಂತವನ್ನು ಮೇಲಕ್ಕೆತ್ತಿದನು.ಇವನು ಪಟ್ಟಕ್ಕೆ ಬರುವ ಮುನ್ನ ಕಡೂರು, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾತ್ರವೇ ಅಡಕವಾಗಿದ್ದ ಚಿಕ್ಕ ಹೊಯ್ಸಳ ಸಾಮ್ರಾಜ್ಯವನ್ನು ತ್ರಾವಣಕೋರದಿಂದ ಕೃಷ್ಣಾ ತಟಾಕದವರೆಗೂ, ಮುಳಬಾಗಿಲದಿಂದ ಬಾರಕೂರವರೆಗೂ ಹಬ್ಬಿಸಿ ಕನ್ನಡ ರಾಜಕೀಯ ದಿಗಂತದ ವೀರಮಾರ್ತಾಂಡನಾಗಿ ಮೆರೆದನು.ಮಲೆಪರೊಳು ಗಂಡ, ಭುಜಬಲವೀರಗಂಗ, ಹೊಯ್ಸಳದೇವನೆಂಬ ಬಿರುದುಗಳಿದ್ದುದೇ ಅವನ ಹಿರಿಮೆಗೆ ಸಾಕ್ಷಿ.ಜೈನ ಧರ್ಮದಲ್ಲಿ ಹುಟ್ಟಿ ಬೆಳೆದ ವಿಷ್ಣುವರ್ಧನನು ಚೋಳರಿಂದ ಪೀಡಿತನಾಗಿ ದೇಶವನ್ನು ತ್ಯಜಿಸಿ ಬಂದ ರಾಮಾನುಜಾಚಾರ್ಯರ ಕೈಯಲ್ಲಿ ಬೋಧೆವಿಡಿದು ವೈಷ್ಣವ ಧರ್ಮವನ್ನಂಗೀಕರಿಸಿ,ಉಭಯ ಧರ್ಮಗಳನ್ನು ಸಮದೃಷ್ಟಿಯಿಂದ ಪರಿಪಾಲನೆ ಮಾಡಿದನು. ಜೈನಧರ್ಮವನ್ನು ಬಿಟ್ಟ ಮಾತ್ರಕ್ಕೆಅದನ್ನೆಂದಿಗೂ ಕಡೆಗಣಿಸಿ ನೋಡದೆ ಆ ಮತದ ಅನುಯಾಯಿಗಳನ್ನೂ ಕವಿಗಳನ್ನೂ ಅಭಿಮಾನದಿಂದ ಕಾಯ್ದು ಆಶ್ರಯವನ್ನಿತ್ತನು.

ಕನ್ನಡ ಕುಲದೀಪಕನಾದ ಈ ಹೊಯ್ಸಳರಾಯನ ಓಲಗವು ವಿವಿಧ ಕಲಾ ಪಂಡಿತರಿಂದ ಅಲಂಕೃತವಾಗಿದ್ದಿತು.ಈಗ ತಿಳಿದಿರುವ ಮಟ್ಟಿಗೆ ಅಭಿನವ ಪಂಪನೆಂಬ ಹೆಸರಿನಿಂದ ನೆಗಳ್ತೆವಡೆದಿರುವ ನಾಗಚಂದ್ರನೆಂಬ ಕವಿಯೂ, ಕಬ್ಬಿಗಿತಿ ಕಂತಿಯೂ ದೋರ ಸಮುದ್ರದರಾಯನ ಆಸ್ಥಾನ ವಿದ್ವನ್ಮಣಿಗಳಾಗಿದ್ದರು. ನಾಗಚಂದ್ರನಿಂದ ಕಂತಿಗೆ ಕೀರ್ತಿಯೂ, ಕಂತಿಯಿಂದ ನಾಗಚಂದ್ರನಿಗೆ ಯಶೋಲಾಭವೂ ಆ ಕಾಲಕ್ಕೆ ದೊರೆತಿದ್ದಿತು ಎನ್ನುವುದಕ್ಕೆ ಉಲ್ಲೇಖನಗಳು ಸಿಗುವವು. ನಾಗಚಂದ್ರನೂಜೈನ, ಕಂತಿಯೂ ಜೈನಳು.ಸರಸ ಜೀವಿಗಳೂ, ಪ್ರತಿಭಾನ್ವಿತರೂಆದಇವರಿಂದ ವಿಷ್ಣುವರ್ಧನನ ಓಲಗಕ್ಕೊಂದು ಬಣ್ಣ ಬಂದಿದ್ದಿತು.

ನಾಗಚಂದ್ರನು ಕನ್ನಡದ ಹೆಮ್ಮೆಯ ಕವಿ.ಅವನಿಗೆ ಕನ್ನಡಕ್ಕೆ ಒಬ್ಬನೆ ಆದ ಸತ್ಕವಿ ಪಂಪನನ್ನು ಮೀರಬೇಕೆಂಬ ಆಸೆ. ಆದುದರಿಂದಲೇ ಅಭಿನವ ಪಂಪನೆಂದು ಕಾವ್ಯನಾಮವನ್ನಿಟ್ಟುಕೊಂಡು ರಾಮಚಂದ್ರಚರಿತಪುರಾಣ ಮತ್ತು ಮಲ್ಲಿನಾಥ ಪುರಾಣವೆಂಬೆರಡು ಶ್ರೇಷ್ಠ ಕೃತಿಗಳನ್ನು ವಿರಚಿಸಿದನು.ನಾಗಚಂದ್ರನಿಗೆ 'ಗುರು ಹಂಪದೇವ'ನನ್ನು ಮೀರಲಿಕ್ಕಾಗದಿದ್ದರೂ ಅವನಿಗೆ ತನ್ನಕಾಲದ ಜನರಿಂದಲೂ, ಮುಂದಣ ಕವಿಕುಲದಿಂದಲೂ ಸಾಕಷ್ಟು ಮನ್ನಣೆ ಗೌರವಗಳು ದೊರೆತವು.ಅಭಿಮಾನಮೇರುವಾದ ಅಭಿನವ ಪಂಪನಿಗೆ ತನ್ನ ಕಾವ್ಯ ಪ್ರತಿಭೆಯ ಬಗೆಗೆ ಹೇಳಬಾರದಷ್ಟು ಹೆಮ್ಮೆಯಿದ್ದಿತೆಂದು ತಿಳಿಯುವುದು.ಈ ಹೆಮ್ಮೆಯ ಇದಿರು ಸರಿದೊರೆಯಾಗಿ ನಿಂತು ತನ್ನ ಘನತೆಯನ್ನು ಕಾಯ್ದುಕೊಂಡು ಮೆರೆದವಳು ನಮ್ಮ ಕಬ್ಬಿಗಿತಿ ಕಂತಿ.ನಾಗಚಂದ್ರ ಕಂತಿಯರ ನಡುವೆ ಒಮ್ಮೊಮ್ಮೆಕಾವ್ಯ ಸ್ಪರ್ಧೆಗಳು ನಡೆಯುತ್ತಿದ್ದವು.ಆ ಕಾಲದಲ್ಲೆಲ್ಲಅವರುಅಣ್ಣತಂಗಿಯರ ಒಲವು ಒಲವರಗಳನ್ನು ಒಬ್ಬರಿಗೊಬ್ಬರು ತೋರುತ್ತಿದ್ದರು.

ಕಂತಿ ನಾಗಚಂದ್ರನಂತೆ ಕಾವ್ಯಗಳನ್ನು ಬರೆದಳೋ,ಇಲ್ಲವೋ ತಿಳಿಯದು.ನಮ್ಮ ಕಾಲದವರೆಗೂ ಹರಿದು ಬಂದ ಆಕೆಯ ಕೀರ್ತಿವಾಹಿನಿ ನಿರ್ದಿಷ್ಟವಾದ ಯಾವುದೊಂದುಕೃತಿಯ ಮೂಲಕ ಬಂದಿಲ್ಲ. "ಕಂತಿ ಹಂಪನ ಸಮಸ್ಯೆಗಳು" ಎಂಬ ಪದ್ಯಗಳಿಂದ ಮಾತ್ರ ಕಂತಿಯ ಕಾವ್ಯ ಶಕ್ತಿಯು ತಿಳಿದು ಬಂದಿದೆ. ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಬಾಹುಬಲಿಯೆಂಬ ಕವಿಯು ತನ್ನ ನಾಗಕುಮಾರ

ಚರಿತೆಯಲ್ಲಿ "ಪಂಡಿತರಿಂದ ಹೊಗಳಿಕೆಗೆ ಪಾತ್ರನಾಗಿರುವ ವೀರದೋರರಾಯನ ಸಭೆಗೆ ಮಂಗಳ ಲಕ್ಷ್ಮಿಯಂತೆಯೂ, ಅಭಿನವ ವಾಗ್ದೇವಿಯಂತೆಯೂಆಗಿರುವ ಶುಭಗುಣಚರಿತೆ ಕಂತಿಯನ್ನು ನಾನು ಹೊಗಳುವೆನು" ಎಂದು ಸ್ತುತಿಸಿರುವುದರಿಂದ ಕಂತಿಯ ಕಾವ್ಯಕಲಾ ಪ್ರೌಢಿಮೆಯು ಇನ್ನೂ ಸ್ಪಷ್ಟವಾಗುವುದು. ಅಭಿನವ ಪಂಪನ ಸಮಕಾಲೀನಳಾಗಿ ಬಾಳಿದಕಂತಿ ಅಭಿನವವಾಗ್ದೇವಿ ಎಂದು ಕರೆಸಿಕೊಳ್ಳಬೇಕಾದರೆ ಅವಳು ಇನ್ನೇನಾದರೂಕಾವ್ಯವನ್ನು ರಚಿಸಿರಲೇಬೇಕೆಂಬ ಆಶಯಕ್ಕೆ ಬಲವಾದಅಧಾರ ದೊರಕಿದಂತಾಗುವುದು.ಈವರೆಗೂ ಆಕೆಯ ವಿವರ ಪೂರ್ತಿಯಾಗಿಇನ್ನೂ ಸಂಪಾದನೆಯಾಗದಿರುವುದೇ ವಿಲಕ್ಷಣ ಸಂಗತಿಯಾಗಿರುವುದು.ಆದರೂ ಕಂತಿಯ ಬಗೆಗೆ ಅಲ್ಲಲ್ಲಿ ದೊರೆಯುವ ಉಕ್ತಿಗಳನ್ನೂ, ಸಿಕ್ಕಷ್ಟು ಸಮಸ್ಯಾ ಪೂರ್ತಿಗಳನ್ನೂ ಅವಲೋಕಿಸುವ ಮಾತ್ರದಿಂದಲೇ ನಮ್ಮ ಮನದಿದಿರುಕಂತಿಯ ವ್ಯಕ್ತಿತ್ವ, ಅವಳ ತಿಳಿ ಹಾಸ್ಯ, ಹಸನವಾದ ಮನಸ್ಸು, ಕಾವ್ಯಶಕ್ತಿ ಮೊದಲಾದವುಗಳು ಮೂಡಿ ನಿಲ್ಲುವವು.

"ಕಂತಿ ಹಂಪನ ಸಮಸ್ಯೆಗಳು" ಅವುಗಳಿಂದಲೇ ಕಂತಿಯ ಕಾವ್ಯ ಜೀವನವನ್ನು ನಾವೀಗ ಅರಿತುಕೊಳ್ಳಬೇಕಾಗಿ ಬಂದಿದೆ.ಈ ಸಮಸ್ಯೆಗಳು ಆಶುಕವಿತ್ವದಅತ್ಯುತ್ತಮ ಉದಾಹರಣೆಗಳು. ಪಂಪನು ಕಂತಿಗೆ ಒಮ್ಮೊಮ್ಮೆ ಅವಳ ಕಾವ್ಯಶಕ್ತಿಯನ್ನು ಪರೀಕ್ಷಿಸಲು ಒಂದೊಂದು ಶಬ್ದವನ್ನು, ಪದ್ಯದ ಒಂದೊಂದು ಪಂಕ್ತಿಯನ್ನು ಕೊಟ್ಟು ಅದನ್ನು ಪೂರ್ತಿಯಾಗಿ ರಚಿಸಲು ಆಹ್ವಾನ ಮಾಡುತ್ತಿದ್ದಂತೆಯೂ,ಕಂತಿಯೂ ಆ ಕಾವ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ ಪಂಪನನ್ನು ಬಾಯಿ ಮುಚ್ಚುವಂತೆ ಮಾಡಿ ಅವನಿಗೂ ಪ್ರತಿ ಸವಾಲು ಹಾಕುತ್ತಿದ್ದಂತೆಯೂ ಈ ಸಮಸ್ಯಾ ಪದ್ಯಗಳಿಂದ ತಿಳಿದು ಬರುವುದು. ಒಮ್ಮೆ ಪಂಪನು "ದನವಂ ಕಡಿದು ಬಸದಿಗೆಳೆಯುತ್ತಿರ್ದರ್" ಎಂಬ ವಾಕ್ಯವೊಂದನ್ನು ಕೊಡಲು ಕಂತಿಯು ಅದನ್ನೇ ಕಂದ ಪದ್ಯದ ಕೊನೆಯ ಪಾದವನ್ನಾಗಿಟ್ಟುಕೊಂಡು ಉಳಿದ ಮೂರು ಪಾದಗಳನ್ನು ರಚಿಸಿ ಹೀಗೆ ಪದ್ಯವನ್ನು ಮುಗಿಸಿದಳು.

ವನದೊಳಗೆ ಪುಟ್ಟಿ ಬೆಳೆಯುತೆ
ತನಿಗಂಪ ಪೆತ್ತು ದೆಸೆಗೆ ಬೀರುತ್ತಿರ್ಪಾ ।
ಘನತರ ಸುರುಚಿರ ಸಚ್ಚಂ
ದನವಂ ಕಡಿ ಕಡಿದು ಬಸದಿಗೆಳೆಯುತ್ತಿರ್ದರ್ ॥

ಜೈನಧರ್ಮದಲ್ಲಿಅಹಿಂಸೆಗಿರುವ ಸ್ಥಾನವು ಉತ್ತಮವಾದುದು. ಇದನ್ನರಿತೂ "ದನವನ್ನು ಕಡಿದು ಬಸದಿಗೆಳೆಯುತ್ತಿರ್ದರ್" ಎಂದು ಪಂಪನು ಬೇಕಂತಲೇ ಕೊಟ್ಟ ಮಾತನ್ನು ತನ್ನ ಧರ್ಮದ ಸಾರಕ್ಕೆ ತಕ್ಕಂತೆ ತಿರುಗಿಸಿಕೊಂಡು ಸಹಜ ಸುಂದರವಾದ ಕಾವ್ಯಶೈಲಿಯಲ್ಲಿ ಸಮಸ್ಯಾ ಪೂರ್ತಿಯನ್ನು ಮಾಡಿದುದನ್ನು ಕೇಳಿ ಅಭಿನವ ಪಂಪನು ಮೂಗಿನ ಮೇಲೆ ಕೈಯಿಟ್ಟುಕೊಂಡಿರಬೇಕು. ಕಂತಿಯೂ ಆಗ ಪಂಪನಿಗೊಂದು ಪ್ರತಿ ಸಮಸ್ಯೆಯನ್ನೊಡ್ಡಿ "ನಿನ್ನ ಕವಿತ್ವಮೆಲ್ಲಂ ಮಡಕೆ, ತುಡುಕೆ, ಅಡಕೆ, ಹೊಡಿಕೆ......" ಎಂದು ಹೇಳಿ ಅದನ್ನು ಪೂರ್ತಿಗೊಳಿಸಲು ಆಹ್ವಾನಿಸಿರಬೇಕು.ಅಭಿನವ ಪಂಪಕವಿಯುಅದನ್ನು ಈ ರೀತಿ ತಿರುಗಿಸಿಕೊಂಡಂತೆ ತೋರುವುದು.

ಮಡಕೆ ನಿಮಿರ್ದಾಡೆ ಜಡೆಗಳ್
ತುಡುಕೆ ತರೌಘಮುಮನಭವನತಿ ಕೋಪಸೊಳಂ ।
ಅಡಕೆ ಮರುಳ್ಗಳ್ ಪೆಣನಂ
ಹೊಡೆ ಕೆಡೆದರ್ ದೈತ್ಯರಂದು ತ್ರಿಪುರಸ್ಥಳದೊಳ್ ॥

ಇನ್ನೊಂದು ಬಾರಿ ಒಂದು ಕಂದ ಪದ್ಯದಲ್ಲಿ "ಮನೆ ಕಲ್ಲು ......." ಇತ್ಯಾದಿ ಶಬ್ದಗಳನ್ನು ಸೇರಿಸಿ ಹೇಳೆಂದು ಪಂಪನು ಕೊಟ್ಟ ಸಮಸ್ಯೆಯನ್ನು ಕಂತಿಯು ಪೂರ್ತಿಗೊಳಿಸಿದಂತೆ ಕೆಳಗಿನ ಎರಡು ಪದ್ಯಗಳಿಂದ ತಿಳಿದು ಬರುವುದು.

**ಪಂಪ**

ಮನೆಕಲ್ಲ ಕುದು ಬಾಚಿಯ
ಪೊಸತೆನಿಸುವ ಕೊಡಲಿಯುಳಿಯನೊರ್ಕಂದದೊಳು ॥
ಉಸಿರೆಂದಾ ಗುಣಕಂತಿಕೆ
ಗಸಮಸಮಸ್ಯಮನೆ ಕೊಟ್ಟನಭಿನವಪಂಪಂ ॥

**ಕಂತಿ**

ಮಸೆಕಲ್ಗಿಳಿ ಮಾಬಳಮಂ
ವಸುಧಾತಳಕುದಿರೆ ಬಾಚಿಯೆತ್ತಿದಳೊರ್ವಳ್ ।
ಶಶಿಮುಖಿಗೆ ಕೊಡಲಿಕಾವಧು
ಪೊಸವಣ್ಣಂ ಸವಿದು ನೋಡಿ ನಸುವುಳಿಯೆಂದಳ್ ॥

'ಹರವಿ' ಎಂಬ ಮೂರಕ್ಷರ ಶಬ್ದದ ಮೇಲೆ ಕೆಳಗಿನಂತೆ ಕಂದ ಪದ್ಯವನ್ನು ಬರೆದು ಪಂಪನ ಮುಂದೆ ಕಂತಿ ನಕ್ಕು ನಲಿದಿರಬೇಕೆಂದು ಊಹಿಸಬಹುದಾಗಿದೆ.ಕಡೆಯಅಕ್ಷರಒಡೆದುಓದಿದರೆ ಹರನಾಮ, ನಡುವಿನ ಅಕ್ಷರ ತೆಗೆದರೆ ಹವಿ, ಮೊದಲಕ್ಕರ ಇಲ್ಲವಾದರೆ ರವಿ, ಮೊದಲಿನಿಂದ ಓದಿದರೆ 'ಹರವಿ', ಕಡೆಯಿಂದ ಓದಿದರೆ ವಿರಹ ಎಂಬರ್ಥವನ್ನು ಸೂಚಿಸುವ ಪದ್ಯವು ಕಂತಿಯ ಕಲಾಜಾಣ್ಮೆಯನ್ನು ವ್ಯಕ್ತಪಡಿಸುವಂತಿದೆ.

ಕಡೆದೊಡೆಯಲ್ ಹರನಾಮಂ
ನಡುದೊಡಯಲ್ ಹರಿಯನಾಮಮಾದ್ಯಕ್ಷರಮಂ ।
ತೊಡೆಯಲ್ಕೆ ರವಿಯನಾಮಂ
ಕಡೆಯಿಂದೋದಲ್ಕೆ ವಿರಹ ಕೇಳಲೆ ಪಂಪಾ ॥

ಪಂಪನು ಸುಮ್ಮನಾದನು.ಕ್ಷಣ ಹೊತ್ತು ಯೋಚಿಸಿದನು.ಸಂಸಾರದ ಒಂದು ಸಮಸ್ಯೆ ಅವನ ಕಣ್ಣೆದಿರು ಬಂದು ನಿಂತಿತು. ಹೆಣ್ಣುಜೀವದ ಬಾಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಕಬ್ಬಿಗಿತಿಗೆ ಉಂಟೇ ನೋಡುವ ಎಂದು ಯೋಚಿಸಿ "ಸತ್ತವಳೆದ್ದು ತೌರೂರಿಗೆ ಪೋಗುತ್ತಿರ್ದ್ದಳ್" ಎಂಬ ಸಮಸ್ಯೆಯೊಂದನ್ನು ಪೂರ್ತಿಗೊಳಿಸಲು ಅವಳ ಮುಂದಿರಿಸಿದನು. ಕಂತಿ ತಡಮಾಡಲೇ ಇಲ್ಲ. "ಅತ್ತೆಯ ಕಾಟವು ಅಧಿಕಂ, ಮತ್ತಿನ ಸವತಿಯರ ಕಾಟ, ನಾದಿನಿ ಬೈವಳು. ಪೆತ್ತ ಮಕ್ಕಳಳಲ್ಕೆ ಸಲೆ ಗಂಡನ ಮೊಸರಿಗಾರದೆ ಬೇಸತ್ತವಳೆದ್ದು ತೌರೂರಿಗೆ ಪೋಗುತ್ತಿರ್ದಳ್ " ಎಂದು ಉತ್ತರಿಸಿದಳು. ಕಂತಿಗಿರುವಜೀವನದಅನುಭವದ ಪರಿಚಯ ಕವಿ ಹಂಪನಿಗಾಯಿತು.ಆದರೂ ಇನ್ನೊಂದು ಪ್ರಶ್ನೆ ಹಾಕಿದನು."ಇಲಿಯಂ ಮುರಿದು ತಿನ್ನುತಿರ್ಪರ್" ಎಂಬ ಹಂಪನ ಸಮಸ್ಯೆಗೆ "ಸರಸಿ ಜಾಕ್ಷಿಯರ ಹಸ್ತದೊಳ್ ಹಳಸದೆ ಮಾಳ್ಪ ತಿಲತೈಲದೊಳ್ ಚೆಕ್ಕಲಿಯಂ ಮುರಿಮುರಿದು ತಿನ್ನುತಿರ್ಪರ್" ಎಂಬ ಉತ್ತರ ಕಂತಿಯದು.ಒಗಟಿನ ಪ್ರಶ್ನೆ ಬಂದಾಗಲೂ ಕಂತಿ ತೋರುವ ಜಾಣ್ಮೆಯೂ ಅಷ್ಟೇ ಹಿರಿದಾದುದು."ಬಿಳಿದಂ ಪೊದ್ದು ಬಿಳಿದೊಂದುಟ್ಟು ಬಿಳಿ ಮುತ್ತಿನ ಹಾರವಂ ಧರಿಸಿ ಬೆಳದಿಂಗಳೊಳ್ ಪೋಪಳು", "ಹಲವು ವೃಕ್ಷದ ಮಧ್ಯದೊಳ್ ಪೂತು, ಕಂಡು

ಕಾಯಾಗಿರ್ಪುದು, ಮರ ಬೆವುದು ನಾ ಕಂಡೆ.ಉರಿ ಹೊಗೆ ಕಾಣೆ" ಇದೇನು ವಿಚಿತ್ರ ಹೇಳು ಕಂತಿ ಎಂದು ಕವಿ ಕೇಳಿದ ಒಗಟುಗಳಿಗೆ ಅನುಕ್ರಮವಾಗಿ 'ಅಗಸರ ಮಗಳು', 'ಬೇವಿನ ಮರ' ಎಂಬ ಉಕ್ತಿಕವಯಿತ್ರಿಕಂತಿಯಿಂದ ಬಂದಿತು.

ಈ ರೀತಿಯಾದ ಕಾವ್ಯ ಸಾಮರ್ಥ್ಯವನ್ನು ಶಿವನ ಕೃಪೆಯಿಂದ ಪಡೆದು ಬಂದಳೋ ಏನೋ ಎಂಬಂತಿದ್ದ ಕಂತಿಯನ್ನು ದಿನ ದಿನವೂ ಪರೀಕ್ಷಿಸುತ್ತಿದ್ದ ಅಭಿನವಪಂಪನಿಗೆ ಅವಳಿಂದ ಹೊಗಳಿಸಿಕೊಳ್ಳಬೇಕೆಂಬಾಸೆ ಸಹಜವಾಗಿ ಉಂಟಾಗುತ್ತಿದ್ದಿರಬೇಕು.ಕಂತಿಯು ಒಳಗಿಂದೊಳಗೆ ತನ್ನ ಮನಸ್ಸಿನಲ್ಲಿ ಅವನ ಘನತೆಯನ್ನು ಮನಸ್ಸಿನಿಂದ ಒಪ್ಪಿಕೊಂಡಿದ್ದರೂ, ನಾಗಚಂದ್ರನನ್ನುತುಸುಕೆಣಕಿ ನೋಡಿ ನಗಬೇಕೆಂದು ಇಷ್ಟಪಟ್ಟುಕೊಂಡಿಬಹುದಾದ ಆಕೆಯು ಬಹಿರಂಗವಾಗಿ ಅವನನ್ನು ಹೊಗಳುತ್ತಲೇ ಇರಲಿಲ್ಲ. ಹೀಗೆಂದ ಮಾತ್ರಕ್ಕೆ ಅವರ ಮನಸ್ಸು ಅಷ್ಟು ಸಂಕುಚಿತವಾಗಿದ್ದಿತೆಂದು ಅರ್ಥ ಮಾಡಬಾರದು.ಒಡಹುಟ್ಟಿದವರ ಸಂಬಂಧಗಳನ್ನು ತಳೆದ ಅವರು ಹಾಸ್ಯವಾಗಿ ದಿನಗಳನ್ನು ನಗುನಗುತ್ತ ಕಳೆಯುವುದಕ್ಕೆ ಹಾಗೆ ದಾರಿ ಮಾಡಿಕೊಂಡಿರಬೇಕು ಅಷ್ಟೆ.

ಒಂದು ದಿನ ಇದ್ದಕ್ಕಿದ್ದಂತೆಯೆ ನಾಗಚಂದ್ರನು ಕಂತಿಯಿಂದ ಹೊಗಳಿಸಿಕೊಂಡೇ ತೀರಬೇಕೆಂಬ ಹಟತೊಟ್ಟು ಆಟ ಹೂಡಿದನು.ನಾಗಚಂದ್ರನು ತೀರಿಕೊಂಡನು ಎಂಬ ಸುದ್ದಿಯನ್ನು ಅವನು ಅವಳಿಗೆ ಕಳುಹಿಸಿದನು.ಈ ವಾರ್ತೆಯನ್ನು ಕೇಳಿ ಕಂತಿಗೆ ಸಿಡಿಲು ಬಡಿದಂತಾಯಿತು.ಅವಳು ಕೂಡಲೆ ಓಡಿ ಪಂಪನ ಹತ್ತಿರ ಬಂದಳು.ಪಂಪನು ತೀರಿಕೊಂಡವನಂತೆ ಕೈಕಾಲು ಚಾಚಿ ಮಲಗಿಕೊಂಡುದನ್ನು ಕಂಡು "ನಿಜಕ್ಕೂ ಪಂಪನು ಇಲ್ಲವಾದನೇ" ಎಂದು ಕಂಬನಿಗರೆಯತೊಡಗಿದಳು.ಏನಾದರೂ ಅವಳ ದುಃಖವೇ ಶಮನವಾಗಲೊಲ್ಲದು.ಪಂಪನ ಗುಣಗಳನ್ನು ಒಂದೊಂದಾಗಿ ನೆನೆದು ಬಿಕ್ಕಿ ಬಿಕ್ಕಿ "ಕವಿರಾಯ, ಕವಿಪಿತಾಮಹ, ಕವಿಕಂಠಾಭರಣ, ಕವಿಶಿಖಾಮಣಿ, ಕವಿಚಕ್ರೇಶ ಸಾವು ಅದೆಂತು ಬಂದು ನಿನ್ನನ್ನು ಒಯ್ದಿತು?ನೀನು ಹಾಡಿದರೆ ಕಲ್ಲು ಕಂಬನಿಗರೆಯುವುದು, ಕೊಯ್ದು ಒಣಹಾಕಿದ ಹುಲ್ಲುಚಿಗುರುವುದು, ಕಡಿದುಚೆಲ್ಲಿದಲಡವಿಯ ಮರಗಳು ಪಲ್ಲವಿಸುವವು. ಹಾ!ಕಾವ್ಯರ್ಷಿ ಪಂಪಾ, ನೀನು ಇಲ್ಲವಾದೆಯಾ?ನೀನಿಲ್ಲದ ಮೇಲೆ ಈ ದೋರ ಸಾಮ್ರಾಟನ ಓಲಗದ ಹಂಗು ನನಗೇಕೆ?ಇನ್ಯಾರ ಜತೆಯಲ್ಲಿ ಕವಿತ್ವವಾದ ತರ್ಕ ಮಾಡಲಿ?ದೊಡ್ಡ ದೊಡ್ಡ ವಿಚಾರಗಳು ನಮಗೆ ಇನ್ನು ಮೇಲೆ ಏಕೆ? ಚೆನ್ನಿಗ ಕವಿ ಪಂಪ, ನೀನು ಹೋದ ಮೇಲೆ ಜಗತ್ತೇ ನನಗೆ ಬರಡು" ಎಂದು ಹಾಡಿಕೊಂಡು ದೊಡ್ಡದನಿಮಾಡಿ ಅಳಗೊಡಗಿದಳು. ಆಗ ಸತ್ತವನಂತೆ ನಟಿಸುತ್ತ ಮಲಗಿಕೊಂಡ ಪಂಪನು ಛುಗಿಲನೆ ಎದ್ದು" ಹಾ! ನನ್ನಕಾರ್ಯವಾಯಿತು. ನಿನ್ನಿಂದ ನಾನು ಹೊಗಳಿಸಿಕೊಳ್ಳವುದು ಬೇಕಿದ್ದಿತುಕಂತೀ! ಮೊದಲೇ ನೀನು ಹೋಗಳಿದ್ದರೆ ನಾನೆಲ್ಲಿ ಸಾಯುತ್ತಿದ್ದೆ, ನೀನೆಲ್ಲಿ ಅಳುತ್ತಿದ್ದೀ! ಇಂದು ನೀನು ಸೋತೆ" ಎಂದು ಹೇಳಿದನು.ಇಬ್ಬರೂ ಹೊಟ್ಟೆ ಹುಣ್ಣಾಗುವಂತೆ ಒಂದು ಕ್ಷಣ ಬಿದ್ದು ಬಿದ್ದು ನಕ್ಕರು.ಮರುಕ್ಷಣದಲ್ಲಿಯೇ ಪಂಪನು ಗಂಭೀರವಾದನು.ಕಂತಿಯು ಅಂತರ್ಮುಖಿಯಾದಳು.

ಕಬ್ಬಿಗಿತಿ ಕಂತಿಯ ಶೋಕವು ಶ್ಲೋಕವಾಗಿ ಬಂದ ರೀತಿಯನ್ನು ಆಕೆಯ ಕಾವ್ಯಕಲಾ ನೈಪುಣ್ಯವನ್ನು ಕಂಡು ಅಭಿನವ ಪಂಪನಿಗೆ ಹೇಳಬಾರದ ಹೆಮ್ಮೆಯುಂಟಾಯಿತು.ಕವಿನಾಗಚಂದ್ರನ ನಿರ್ಮಲ ಪ್ರೇಮವನ್ನೂ, ಸರಳ ಹೃದಯವನ್ನೂ ಕಂಡು ಕಂತಿ ಮೆಚ್ಚಿ ಅಂದಿನಿಂದ ಅವನ ಕಾವ್ಯ ಸೌಂದರ್ಯವನ್ನು ಬಹಿರಂಗವಾಗಿ ಮನಸಾರೆ ಬಣ್ಣಿಸುವುದಕ್ಕೆ ಪ್ರಾರಂಭಮಾಡಿದಳು. ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೇ ಈ ಕಬ್ಬಿಗ ಕಬ್ಬಿಗಿತ್ತಿಯರ ಸಂಬಂಧ ಅಪೂರ್ವವಾದುದು. ರಸಿಕತೆಯ ತವರುಮನೆ, ಸುಖದ ಸುಳಿ, ಸಹೃದಯತೆಯ ಆಗರವೆಂದೆನ್ನಿಸಿಕೊಂಡ ಇವರ ಜೀವನವೆ ಒಂದು ಕಾವ್ಯದ ರಸಘಟ್ಟ.ಅದುದರಿಂದಲೇಅವರಕಾವ್ಯಕ್ಕೊಂದುಘನತೆ ಬಂದಿತು.

ಕಂತಿಯು ಪ್ರತಿಭಾನ್ವಿತೆಯಾದ ಕವಯಿತ್ರಿ ಹೇಗಾದಳೆಂಬುದನ್ನು ಕುರಿತು ದೇವಚಂದ್ರನು (1838) ಒಂದು ಸೋಜಿಗದ ಕಥೆಯನ್ನು ಹೇಳಿರುವನು."ದೋರಸಮುದ್ರದಲ್ಲಿ ದೋರರಾಯನು ಆಳುತ್ತಿದ್ದ ಕಾಲದಲ್ಲಿ ಧರ್ಮಚಂದ್ರನೆಂಬ ಬ್ರಾಹ್ಮಣನು ಮಂತ್ರಿಯಾಗಿದ್ದನು.ಅ ಮಂತ್ರಿಯ ಮಗನುಉಪಾಧ್ಯಾಯ ವೃತ್ತಿಯನ್ನುಕೈಕೊಂಡುಛಂದಸ್ಸು, ಅಲಂಕಾರ, ವ್ಯಾಕರಣ, ಕಾವ್ಯಾದಿಗಳನ್ನು ಕುರಿತುಅಭ್ಯಾಸ ಹೇಳುತ್ತಿದ್ದನು.ಮಂದಮತಿಗಳಾದ ಬಾಲಕರ ಬುದ್ಧಿಶಕ್ತಿಯನ್ನು ಹೆಚ್ಚಿಸಲೆಂದು ಜ್ಯೋತಿಷ್ಮತೀ ತೈಲವೆಂಬ ಹೆಸರಿನ ಔಷಧಿಯನ್ನು ಸಿದ್ಧಪಡಿಸಿ ಕುಡಿಕೆಯೊಂದರಲ್ಲಿ ಅದನ್ನು ಇರಿಸಿದ್ದನು.ಮಂದಮತಿಗಳಾದವರಿಗೆ ಅರ್ಧ ಬಿಂದುವನ್ನು ಸೇವಿಸಲು ಕೊಟ್ಟರೆ ಸಾಕು.ಅವರು ಕೂಡಲೇ ಮತಿವಂತರಾಗುತ್ತಿದ್ದರು.ಈ ಜ್ಯೋತಿಷ್ಮತೀ ತೈಲದ ಕುಡಿಕೆಯನ್ನು ಅರಿಯದೆ ಒಂದು ದಿನ ಕಂತಿಯೆಂಬ ಸೇವಕಳು ಕುಡಿದು ಬಿಟ್ಟಳು.ಆಗ ಅವಳ ಒಡಲಲ್ಲಿ ಬೆಂಕಿಯನ್ನು ಹಾಕಿದಂತಾಯಿತು.ಆ ತಾಪವನ್ನು ಸಹಿಸಲಾರದೆ ಅವಳು ಬಾವಿಯಲ್ಲಿ ಹಾರಿಕೊಂಡಳು. ವಿಧಿವಶದಿಂದ ಬಾವಿಯಲ್ಲಿಯ ನೀರು ಅವಳ ಕುತ್ತಿಗೆಯವರೆಗೆ ಮಾತ್ರ ಬಂದುದರಿಂದ ಜೀವ ಉಳಿಯಿತು.ನೀರಿನಲ್ಲಿ ಕಂತಿಯ ದೇಹದಲ್ಲಿ ಪ್ರತಿಭೆಯ ಕೋಲ್ಮಿಂಚೊಂದು ಸುಳಿಯಿತು.ನಿಂತಲ್ಲಿಯೇ ನಿಂತು ಸುಂದರವಾದ ಕವನಗಳನ್ನು ಕಟ್ಟಿ ಹೇಳತೊಡಗಿದಳು.ಆಸ್ಥಾನ ಪಂಡಿತನಾದ ಅಭಿನವಪಂಪನವರೆಗೂ ಈ ಸುದ್ದಿ ಹೋಯಿತು.ಪಂಪನು ಒಂದು ಬಾವಿಯ ದಂಡೆಯ ಮೇಲೆ ನಿಂತು ಆಕೆಗೆ ಸಾವಿರ ಪ್ರಶ್ನೆಗಳನ್ನು ಕೇಳಿದನು.ಅವುಗಳಿಗೆಲ್ಲ ಸಮರ್ಪಕವಾದ ಉತ್ತರವನ್ನು ಕೊಡಲು ಆಕೆಯನ್ನು ರಾಜಸಭೆಗೆ ಕರೆದುಕೊಂಡು ಬಂದು ವಿದ್ವನ್ಮಂಡಲಿಯ ಮಧ್ಯದಲ್ಲಿಅಧಿಕಕವೀಶ್ವರಿಯನ್ನಾಗಿ ಮಾಡಿದರು.

ದೇವಚಂದ್ರನು ಹೇಳುವ ಈ ಕಥೆಯು ನಿಜವಾದುದೇ ಇರಲಿ, ಕಟ್ಟು ಕಥೆಯೇ ಇರಲಿ, ಏನಿದ್ದರೂ ಸರಿ.ಮುಖ್ಯವಾಗಿ ನಮಗೆ ನಾಗಚಂದ್ರನ ಸಮಕಾಲೀನಳಾಗಿ ಬಾಳಿದ ಕಂತಿ ಅವನಿಗೆ ಸರಿದೊರೆಯಾದ ಮನ್ನಣೆಯನ್ನು ಪಡೆದು ಆಸ್ಥಾನದ ಹೆಮ್ಮೆಯ ಕಬ್ಬಿಗಿತಿಯಾಗಿ ಮೆರೆದಿರಬೇಕೆಂಬುದು ಇದರಿಂದ ಗೋಚರವಾಗುವುದು.ಆಕೆಯ ಪಾಂಡಿತ್ಯವನ್ನೂ, ವಿಶಾಲವಾದ ಮನೋಧರ್ಮವನ್ನೂ ಓರೆಹಚ್ಚಿ ನೋಡಲು ಆಕೆಯ ಕೃತಿಗಳು ನಮಗೆ ದೊರೆತಿಲ್ಲವಾದರೂ ಬಾಹುಬಲಿ, ದೇವಚಂದ್ರ ಮೊದಲಾದವರು ಕಂತಿಯ ಬಗೆಗೆ ಹೇಳಿರುವ ಉಕ್ತಿಗಳು "ಕಂತಿ ಹಂಪನ ಸಮಸ್ಯೆಗಳು" ಇವು ಈ ದಿಶೆಯಲ್ಲಿ ಸಹಾಯಕಾರಿಯಾಗಿರುವುವು.ಇವು ಕಂತಿಯಕಾವ್ಯವೆನ್ನಬಹುದಾದ ಬೇರಿನ್ನಾವಕೃತಿಯುದೊರೆತುದಾದರೂಕನ್ನಡದ ಹೆಮ್ಮೆಯ ಮೊತ್ತ ಮೊದಲ ಕಬ್ಬಿಗಿತ್ತಿಯಾಗುವ ಪಟ್ಟ ಆಕೆಗೆ ನಿಸ್ಸಂದೇಹವಾಗಿ ದೊರೆಯುವುದು.

**ಪರಾಮರ್ಶನ ಕೃತಿಗಳು**


1. ಆಲೂರ ವೆಂಕಟರಾವ್ – ಕರ್ನಾಟಕದ ವೀರ ರತ್ನಗಳು
2. ಕವಿ ಚರಿತೆ (1,2,3)– ಆರ್.ನರಸಿಂಹಾಚಾರ್ಯ
3. ಮಿಂಚಿದ ಮಹಿಳೆಯರು –ಪಿ.ಬಿ.ದೇಸಾಯಿ
4. ಕನ್ನಡ ಸಾಹಿತ್ಯದಲ್ಲಿ ಮಹಿಳೆಯರು– ಆರ್.ಎಸ್.ರಾಮರಾವ್